**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 12.07.2021.

**1] ತಿಕೋಟಾ ಪೊಲೀಸ ಠಾಣೆ ಗುನ್ನೆ ನಂ: 107/2021 ಕಲಂ: 279, 304(ಎ), 283 ಐಪಿಸಿ**

ದಿನಾಂಕ 10.07.2021 ರಂದು 20.30 ಗಂಟೆಯ ನಡುವೆ ಇದರಲ್ಲಿಯ ಆರೋಪಿತರಾದ ಮೃತ: 1] ಸೀತಾರಾಮ ತಂದೆ ಭೀಮಶಿಂಗ ಚವ್ಹಾಣ ವಯಾ: 41 ವರ್ಷ ಸಾ: ಕಾಗನೇರಿ ತಾಂಡಾ 2)ಟ್ರ್ಯಾಕ್ಟರ್ ಬೇರಿಂಗ ನಂ ಕೆಎ:28 ಟಿಎ:0459 ನೇದ್ದರ ಚಾಲಕ ಹೆಸರು ವಿಳಾಸ ನಮೂ ಇರುವದಿಲ್ಲಾ. ಮೃತ ಸೀತಾರಾಮ ಭೀಮಶಿಂಗ ಚವ್ಹಾಣ ವಯಾ: 41 ವರ್ಷ ಸಾ: ಕಾಗನೇರಿ ತಾಂಡಾ ಇವನು ತಾನು ನಡೆಸುತ್ತಿದ್ದ ಎಕ್ಸೇಲ್ ಮೋಟಾರ್ ಸೈಕಲ್ ನಂ ಕೆಎ:40 ಜೆ:9872 ನೇದ್ದನ್ನು ಜಾಲಗೇರಿ ಕಡೆಯಿಂದ ಟಕ್ಕಳಕಿ ಕಡೆಗೆ ಅತಿ ಜೋರಾಗಿ ಮತ್ತು ನಿರ್ಲಕ್ಷತನದಿಂದ ನಡೆಯಿಸಿಕೊಂಡು ಬಂದು ಜಾಲಗೇರಿ ತಾಂಡಾ ನಂ 01 ರ ರಮೇಶ ಚವ್ಹಾಣ ಇವರ ಜಮೀನದ ಹತ್ತಿರ ಟ್ರ್ಯಾಕ್ಟರ್ ಚಾಲಕ ರಸ್ತೆಯ ಮೇಲೆ ಅಡತಡೆ ಮಾಡಿ ಯಾವುದೇ ಶಿಗ್ನಲ್ ಮತ್ತು ಸೂಚನಾ ಫಲಕ ಹಾಕದೇ ಫಾರ್ಕಿಂಗ ಲೈಟ ಹಚ್ಚದೆ ನಿಲ್ಲಿಸಿದ ಟ್ರ್ಯಾಕ್ಟರ್ ಬೇರಿಂಗ ನಂ ಕೆಎ:28 ಟಿಎ:0459 ನೇದ್ದಕ್ಕೆ ಹಿಂದೆ ಜೋಡಿಸಿದ ನಂಬರ ನಮೂದ ಇಲ್ಲದ ಟ್ರೇಲರ್‌ಕ್ಕೆ ಹಿಂದಿನಿಂದ ಢಿಕ್ಕಿ ಹೊಡೆಯಿಸಿ ಅಫಘಾತ ಪಡಿಸಿ ತಾನು ತಲೆಗೆ ತಲೆಗೆ ಭಾರಿ ಒಳಪೇಟ್ಟು ಹೊಂದಿ ಸ್ಥಳದಲ್ಲಿಯೇ ಮರಣ ಹೊಂದಿದ್ದು ಇರುತ್ತದೆ. ಈ ಬಗ್ಗೆ ಕಲಾವತಿ ಸೀತಾರಾಮ ಚವ್ಹಾಣ ಸಾ॥ ಕಾಗನೇರಿ ತಾಂಡಾ ತಾ॥ಜತ್ತ ಜಿ॥ಸಾಂಗಲಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07.2021 ರಂದು ತಿಕೋಟಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ದೇವರ ಹಿಪ್ಪರಗಿ ಪೊಲೀಸ ಠಾಣೆ ಗುನ್ನಾ. ನಂ: 114/2021 ಕಲಂ: 279, 304(ಎ) ಐ.ಪಿ.ಸಿ.**

ದಿನಾಂಕ 07.07.2021 ರಂದು 15:00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತನಾದ ಮೃತ: ಗಂಗಾಧರ @ ಅನೀಲ ಕೇಸು ಚವ್ಹಾಣ, ವಯಾ: 32 ವರ್ಷ, ಉದ್ಯೋಗ: ಅಟೇಂಡರ್ ನೌಕರಿ, ಸಾ: ಹಿಟ್ನಳ್ಳಿ ತಾಂಡಾ, ತಾ: ದೇವರ ಹಿಪ್ಪರಗಿ ಮೋಟಾರ್ ಸೈಕಲ್ ಕೆಎ:28 ಇಪಿ:5342 ನೇದ್ದರ ಸವಾರ. ಈತನು ತನ್ನ ಮೋಟಾರ್ ಸೈಕಲ್ ನೇದ್ದರ ಮೇಲೆ ತಾಂಬಾದ ಕಡೆಯಿಂದ ಚಿಕ್ಕರೂಗಿ ಕಡೆಗೆ ಬರುತ್ತಿದ್ದಾಗ ತನ್ನ ಮೋಟಾರ್ ಸೈಕಲ್‌ನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ನಡೆಸಿಕೊಂಡು ಬಂದು ಚಿಕ್ಕರೂಗಿಯ ಲಕ್ಷ್ಮೀ ದಾಭಾದ ಹತ್ತಿರ 15:00 ಗಂಟೆಯ ಸುಮಾರಿಗೆ ರಸ್ತೆಯ ಮೇಲಿನ ತಗ್ಗನ್ನು ತಪ್ಪಿಸಲು ಹೋಗಿ ಮೋಟಾರ್ ಸೈಕಲ್‌ದ ವೇಗ ನಿಯಂತ್ರಿಸಲಾಗದೆ ತನ್ನಷ್ಟಕ್ಕೆ ತಾನೇ ಸ್ಕಿಡ್ ಆಗಿ ಬಿದ್ದು ಭಾರಿ ಗಾಯ-ಪೆಟ್ಟು ಹೊಂದಿದ್ದು, ಅವನಿಗೆ ಉಪಚಾರ ಕುರಿತು ವಿಜಯಪುರದ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿ ದಾಖಲು ಮಾಡಿದಾಗ ಅವನು ಗುಣಮುಖನಾಗದೆ ಸದರ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾನೆ. ಈ ಬಗ್ಗೆ ಭಾರತಿ ಗಂಗಾಧರ@ಅನೀಲ ಚವ್ಹಾಣ, ಸಾ: ಹಿಟ್ನಳ್ಳಿ ತಾಂಡಾ, ತಾ: ದೇವರ ಹಿಪ್ಪರಗಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ದೇವರ ಹಿಪ್ಪರಗಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಗೋಲಗುಮ್ಮಜ ಪೊಲೀಸ ಠಾಣೆ ಗುನ್ನಾ. ನಂ: 90/2021 ಕಲಂ: 143, 147, 114, 341, 323, 324, 354, 307, 504, 506 ರೆ/ವು 149 ಐಪಿಸಿ.**

ದಿನಾಂಕ 10.07.2021 ರಂದು 19.00 ಗಂಟೆಯಿಂದ 19.20 ಗಂಟೆಯ ನಡುವಿನ ಅವಧಿಯಲ್ಲಿ ಇದರಲ್ಲಿ ಆರೋಪಿತರಾದ 1] ಮನೋಹರ ಕುಶಾಲಸಿಂಗ ರಾಠೋಡ, ಹಾಗೂ ಇನ್ನೂ 9 ಜನರು ಸಾ: ಎಲ್ಲರೂ ಮುನೇಶ್ವರ ನಗರ, ಸಿಂದಗಿ ರಸ್ತೆ ವಿಜಯಪುರ. ಪಿರ್ಯಾದುದಾರರ ಮನೆಯವರು ಹಾಗೂ ಆರೋಪಿತರು ಒಂದೆ ಓಣಿಯವರಾಗಿದ್ದು, ಈ ಹಿಂದೆ ಹೊಲದ ಆಸ್ತಿಯ ಸಲುವಾಗಿ ಒಬ್ಬರಿಗೊಬ್ಬರು ಜಗಳಾ ಮಾಡಿ ಹಿರಿಯರಲ್ಲೇ ಬಗೆಹರಿಸಿಕೊಂಡು ಒಬ್ಬರಿಗೊಬ್ಬರು ಸಿಟ್ಟಾಗಿದ್ದು, ಪಿರ್ಯಾದುದಾರರ ಎಮ್ಮೆಯ ಕರು ಆಕಸ್ಮಿಕವಾಗಿ ಹಗ್ಗ ಹರಿದುಕೊಂಡು ಮನೋಹರ ರಾಠೋಡ ಇವರ ಮೇವಿನ ಬನವಿಗೆ ಹೋಗಿ ಕಣಕಿ ತಿನ್ನುತ್ತಿರುವಾಗ ಪಿರ್ಯಾದಿದಾರರ ಮಗ ಎಮ್ಮೆ ಕರುವನ್ನು ಹೊಡೆದುಕೊಂಡು ಬರಲು ಹೋದಾಗ ಆನಂದ @ ಅನ್ನು ಈತನು ಪಿರ್ಯಾದಿಯ ಮಗನಿಗೆ ಹಲಕಟ್ ಬೈದು ತನ್ನ ಕೈಯಲ್ಲಿದ್ದ ಬಾರಕೋಲದಿಂದ ಹೊಡೆದಿದ್ದು, ಆಗ ಪಿರ್ಯಾದಿಯು ಕೇಳಲು ಹೋದಾಗ ಆರೋಪಿತರೆಲ್ಲರೂ ಕೂಡಿಕೊಂಡು ಹಲಕಟ್ ಬೈಯುತ್ತಾ ಹತ್ತಿರ ಬಂದು ಕಿರಣನು ಹಾಗೂ ಸಂಜು ಇವರಿಬ್ಬರೂ ಕೈಯಿಂದ ಪಿರ್ಯಾದಿಗೆ ಹೊಡಿಬಡಿ ಮಾಡಿದ್ದು, ಮನೋಹರ ಈತನು ಪಿರ್ಯಾದಿಗೆ ಅವಮಾನ ಪಡಿಸುವ ಉದ್ದೇಶದಿಂದ ಕೂದಲನ್ನು ಹಾಗೂ ಉಟ್ಟುಕೊಂಡ ಸೀರೆಯನ್ನು ಹಿಡಿದು ಎಳೆದಾಡಿ ಅವಮಾನ ಪಡಿಸಿದ್ದು, ಆಗ ಗುರುಸಿಂಗ ಇವರು ಜಗಳ ಬಿಡಿಸಲು ಮದ್ಯ ಬಂದಾಗ ಆನಂದ ಉರ್ಪ ಅನ್ನು ಈತನು ಅಲ್ಲಿಯೇ ಬಿದ್ದಿದ್ದ ಕಬ್ಬಿಣದ ರಾಡ್‌ವನ್ನು ತೆಗೆದುಕೊಂಡು ಏ ಮಗನಾ ನಿನ್ನ ಕೊಂದು ನಿನ್ನ ಹೆಂಡತಿಯ ಜೊತೆ ಸಂಸಾರ ಮಾಡುತ್ತೇವೆ ಅಂದವನೆ ಪಿರ್ಯಾದಿಯ ಗಂಡನ ತಲೆಗೆ ಹಾಗೂ ಕಾಲಿಗೆ ಹೊಡೆದು ಭಾರಿ ಗಾಯಪಡಿಸಿದ್ದು, ಆಗ ಲೋಹಿತ ಹಾಗೂ ಲಕ್ಷ್ಮಣ ಇವರು ಅಲ್ಲಿಯೇ ಬಿದ್ದಿದ್ದ ಇಟ್ಟಂಗಿ ತುಕಡಿಯಿಂದ ಪಿರ್ಯಾದಿಯ ಬೆನ್ನಿಗೆ, ತಲೆಗೆ ಹೊಡೆದು ಒಳಪೆಟ್ಟು ಭಾರಿ ಗಾಯಗೊಳಿಸಿದ್ದು, ಆಗ ಅಲ್ಲಿಯೇ ಇದ್ದ ಸುನೀತಾ ಇವಳು ಬಿಡಬ್ಯಾಡರಿ ಅವರಿಗೆ ಹೊಡಿರಿ ಅಂತಾ ಹೇಳಿದ್ದಲ್ಲದೇ ಆರೋಪಿತರೆಲ್ಲರೂ ಹೋಗುವಾಗ ಈಗ ಉಳದಿರಿ ಮಕ್ಕಳ್ಯಾ ಇನ್ನೊಮ್ಮೆ ಸಿಕ್ಕರೆ ಖಲಾಸ ಮಾಡುತ್ತೇವೆ ಅನ್ನುತ್ತಾ ಜೀವ ಬೆದರಿಕೆ ಹಾಕಿದ ಅಪರಾಧ. ಈ ಬಗ್ಗೆ ಸುಜಾತಾ ಗುರುಸಿಂಗ ರಾಠೋಡ, ಸಾ: ಮುನೇಶ್ವರ ನಗರ, ಸಿಂದಗಿ ರಸ್ತೆ ವಿಜಯಪುರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ಗೋಲಗುಮ್ಮಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 199/2021 ಕಲಂ: 87 ಕೆ ಪಿ ಆ್ಯಕ್ಟ್.**

ದಿನಾಂಕ 11.07.2021 ರಂದು 16.00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಸೋಮು ಶಂಕರ ಚವ್ಹಾಣ ಸಾ: ಅಫಜಲಪುರ ಟಕ್ಕೆ ಹಾಗೂ ಇನ್ನು 11 ಜನರು ಇವರು ಕುಮಟಗಿ ತಾಂಡಾದ ಸರಕಾರಿ ಶಾಲೆಯ ಹಿಂದೆ ಕಂಟಿಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ತಮ್ಮ ತಮ್ಮ ಪಾಯ್ದೇಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಅಂದರ ಬಾಹರ ಅನ್ನುವ ಮನ್ನಾ ಜೂಜಾಟ ಆಡುವ ಕಾಲಕ್ಕೆ ಸಿಕ್ಕ ಅಪರಾಧ ಜಪ್ತಾದ ಮಾಲು 1] ರೋಖ ಹಣ 6500/- ರೂ ಗಳು 2] 52 ಇಸ್ಪೇಟ ಎಲೆಗಳು ಕಿ: 00-00 ಈ ಬಗ್ಗೆ ಸ:ತ: ಜಿ ಎಸ್ ಉಪ್ಪಾರ ಪಿಎಸ್ಐ ಗ್ರಾಮೀಣ ಪಿಎಸ್ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**5] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 117/2021 ಕಲಂ: ಮಹಿಳೆ ಕಾಣೆ.**

ದಿನಾಂಕ 28.06.2021 ರಂದು ಮುಂಜಾನೆ 08.00 ಗಂಟೆಯಿಂದ ಮುಂಜಾನೆ 09.30 ಗಂಟೆಯ ನಡುವಿನ ವೇಳೆಯಲ್ಲಿ ಇದರಲ್ಲಿಯ ಕಾಣೆಯಾದ ಶಾಂತಾಬಾಯಿ ಗಂಡ ಬಸಪ್ಪ ಕುಂಬಾರ ವಯಾ: 49 ವರ್ಷ ಸಾ: ಲಾಳಸಂಗಿ ತಾ: ಇಂಡಿ ಇವಳು ತಮ್ಮ ಮನೆಯಲ್ಲಿಂದ ಯಾರಿಗೂ ಹೇಳದೆ ಕೇಳದೆ ಎಲ್ಲಿಯೋ ಹೋಗಿ ಪರ್ತ ಮನೆಗೆ ಬಾರದೆ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಬಸಪ್ಪ ಗೊಲ್ಲಾಳಪ್ಪ ಕಂಬಾರ ಸಾ॥ ಲಾಳಸಂಗಿ. ತಾ॥ ಇಂಡಿ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**6] ಹೊರ್ತಿ ಪೊಲೀಸ ಠಾಣೆ ಗುನ್ನಾ. ನಂ: 87/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 11.07.2021 ರಂದು 15:00 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1) ಅಪ್ಪು ಸಾಂಕು ಚವ್ಹಾಣ ಹಾಗೂ ಇನ್ನೂ 19 ಜನರು ಸಾ॥ ಎಲ್ಲರೂ ಇಂಚಗೇರಿ ಮಾಹಾವೀರ ನಗರ ತಾಂಡಾ ತಾ॥ ಚಡಚಣ ಜಿ॥ ವಿಜಯಪೂರ ಇವರು ಇಂಚಗೇರಿ ಮಹಾವೀರ ನಗರ ತಾಂಡಾದ ದುರ್ಗಾದೇವಿ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಅಂದರ್ ಬಾಹರ್ ಎಂಬುವ ಮನ್ನಾ ಇಸ್ಪೇಟ್ ಜೂಜಾಟದಲ್ಲಿ ತೊಡಗಿದಾಗ ಸಿಕ್ಕ ಅಪರಾಧ. ಜಪ್ತಾದ ಮಾಲು: ರೋಖ ಹಣ: 69,300/- ರೂ ಹಾಗೂ 52 ಇಸ್ಪೀಟ ಎಲೆಗಳು ಈ ಬಗ್ಗೆ ಸ:ತ: ಎನ್.ಬಿ.ಶಿವೂರ ಪಿ.ಎಸ್.ಐ ಹೊರ್ತಿ ಪೊಲೀಸ್ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ಹೊರ್ತಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**7] ತಾಳಿಕೋಟಿ ಪೊಲೀಸ ಠಾಣೆ ಗುನ್ನಾ. ನಂ: 124/2021 ಕಲಂ: 87 ಕೆ.ಪಿ.ಆ್ಯಕ್ಟ.**

ದಿನಾಂಕ 10.07.2021 ರಂದು 18.30 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ ಭೀಮನಗೌಡ ರುದ್ರಗೌಡ ಹೆಮ್ಮಡಗಿ ಸಾ॥ ಕೊಡಗಾನೂರ ಹಾಗೂ ಇನ್ನೂ 7 ಜನರು ಇವರು ಕೊಡಗಾನೂರ ಕ್ರಾಸ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತಮ್ಮ ತಮ್ಮ ಪಾಯ್ದೆಗೋಸ್ಕರ ಸಾರ್ವಜನಿಕ ಸ್ಥಳದಲ್ಲಿ ಕುಳಿತು ಹಣ ಹಚ್ಚಿ ಇಸ್ಪಿಟ ಎಲೆಗಳ ಸಹಾಯದಿಂದ ಅಂದರ ಬಾಹರ ಅಂಬುವ ಇಸ್ಪಿಟ ಜೂಜಾಟ ಆಡುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: ಸೇರಿ 5200/- ರೂ, 52 ಇಸ್ಪಿಟ್ ಎಲೆಗಳು ಈ ಬಗ್ಗೆ ಸ:ತ: ವಿನೋದ ದೊಡಮನಿ ಪಿಎಸ್ಐ [ಕಾ.ಸೂ] ತಾಳಿಕೋಟಿ ಪೊಲೀಸ್‌ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 11.07,2021 ರಂದು ತಾಳಿಕೋಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.